



ಭೂತಾನಿನ ಮುಖ್ಯಪಟ್ಟಣಗಳಲ್ಲಿ ಒಂದಾದ 'ಪಾರೊ'ವಿನಿಂದ ಸುಮಾರು ಹತ್ತು ಕಿ.ಮೀ ಉತ್ತರಕ್ಕೆ ಬಂಡೆಯ ಮೇಲೊಂದು ಬೌದ್ಧ ದೇವಾಲಯವಿದೆ. ಇದು ಬೌದ್ಧ ಸನ್ಯಾಸಿಗಳ ವಾಸಸ್ಥಳ. ಈ ಬಂಡೆಗಳ ಮೇಲೆ ಹತ್ತಿ ಇಳಿಯುವುದೇ ಒಂದು ವಿಶಿಷ್ಟ ಅನುಭವ. ಬೌದ್ಧ ಧರ್ಮದ ಅನುಯಾಯಿಗಳು ಟೈಗರ್ ನೆಸ್ಟ್ ನೋಡಲು ಮುಗಿಬೀಳುತ್ತಾರೆ.

ಈ ಬೆಟ್ಟಗಳಿಗೆ ಟೈಗರ್ ನೆಸ್ಟ್ ಎನ್ನುವ ಹೆಸರೂ ಇದೆ. ಇದರ ಇತಿಹಾಸವೂ ಕುತೂಹಲಕರ. 'ತಕ್ಸಂಗ್ ಪಾಲಪಗ್ ಮೊನಾಸ್ಟ್ರಿ' ಮತ್ತು 'ಪಾರೊ ಮೊನಾಸ್ಟ್ರಿ' ಎಂದೂ ಕರೆಯುವ ಇದನ್ನು ಕಟ್ಟಿದ್ದು ಅಂದಾಜು ಕ್ರಿ.ಶ. 1692ರಲ್ಲಿ. ಗುರು ಪದ್ಮ ಸಂಭವನ ನೆನಪಿನಲ್ಲಿ ಕಟ್ಟಿಸಲಾದ ಸ್ಮಾರಕವಿದು. ಇದಕ್ಕೂ ಒಂದು ಐತಿಹ್ಯವಿದೆ.

8ನೇ ಶತಮಾನದಲ್ಲಿ ಗುರು ಪದ್ಮಸಂಭವ ಟಿಬೇಟಿನಿಂದ ಹಾರುವ ಹುಲಿಯ ಬೆನ್ನೇರಿ ಬಂದು ಈ ಬೆಟ್ಟ ಹತ್ತಿ ಗುಹೆಯಲ್ಲಿ ಕೂತು, 3 ವರ್ಷ, 3 ತಿಂಗಳು, 3 ವಾರ, 3 ದಿನ, 3 ಗಂಟೆ ತಪಸ್ಸು ಮಾಡಿದರು ಎನ್ನುವುದು ಐತಿಹ್ಯ. ಹಾಗೆಂದೇ ಇದಕ್ಕೆ ಟೈಗರ್ ನೆಸ್ಟ್ ಎಂಬ ಹೆಸರು ಬಂದಿದೆ.

ಬೌದ್ಧ ಧರ್ಮವನ್ನು ಭೂತಾನಿಗೆ ತಂದ ಕೀರ್ತಿ ಗುರು ಪದ್ಮ ಸಂಭವನಿಗೆ ಸಲ್ಲುತ್ತದೆ. ಬೆಟ್ಟದ ಮೇಲೆ ಬಂಡೆಗಳ ಆಸರೆಯಲ್ಲಿ ಕಟ್ಟಿದ ಈ ಕಟ್ಟಡವನ್ನು ಹಲವು ಸಲ ನವೀಕರಿಸಲಾಗಿದೆ. 1998ರಲ್ಲಿ ಕಟ್ಟಡದ ಒಂದು ಭಾಗ ಬೆಂಕಿಗೆ ಆಹುತಿಯಾಗಿತ್ತು. ಬಳಿಕ ಅದರ ಪುನರ್‌ನಿರ್ಮಾಣ ಕಾರ್ಯ ಆರಂಭವಾಗಿ 2005ರಲ್ಲಿ ಮುಗಿಯಿತು. ಬೆಟ್ಟದ ದಾರಿ ಅತ್ಯಂತ ಏರು ಮುಖವಾಗಿದ್ದು ಕೈ ಕಾಲು ಗಟ್ಟಿ ಇರುವವರು ಕೋಲಿನ ಸಹಾಯದಿಂದ ಮೆಲ್ಲನೆ ಹತ್ತಬೇಕು. ಮಧ್ಯೆ ಮಧ್ಯೆ ಬೀಸುವ ತಂಗಾಳಿಯೂ ಏರುವವರ ಆಯಾಸವನ್ನು ಕಡಿಮೆ ಮಾಡುತ್ತದೆ. ಕುದುರೆಯ ಬೆನ್ನೇರಿಯೂ ಬೆಟ್ಟ ಹತ್ತಬಹುದು,